ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು)

ಅ) ಇಲ್ಲ

ಆ) ಉದ್ಭವಿಸುವುದಿಲ್ಲ

ಇ) ಉದ್ಭವಿಸುವುದಿಲ್ಲ

505(249) ಶ್ರೀ ರವಿ ಸಿ ಟಿ (ಚಿಕ್ಕಮಗಳೂರು) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ರಾಜ್ಯ ಸರ್ಕಾರವು ಗೋಹತ್ಯೆ ಮಾಡಲು ಅನುಮತಿ ನೀಡಿದೆಯೇ

ಆ) ನೀಡಿದ್ದಲ್ಲಿ ರಾಜ್ಯದಲ್ಲಿ ಎಷ್ಟು ಪರವಾನಗಿಗಳನ್ನು ನೀಡಲಾಗಿದೆ (ಜಿಲ್ಲಾವಾರು ವಿವರ ನೀಡುವುದು)

ಇ) ಚಿಕ್ಕಮಗಳೂರಿನಲ್ಲಿ ಪರವಾನಗಿ ಪಡೆದ ಕಸಾಯಿ ಖಾನೆಗಳು ಎಷ್ಟು.

ಈ) ಗೋಹತ್ಯೆ ನಿಷೇಧಕ್ಕೆ ಸರ್ಕಾರ ಕ್ರಮ ಕೈಗೊಳ್ಳುವುದೇ

ಉ) ನಿಷೇಧವನ್ನು ಯಾವಾಗ ಜಾರಿಗೊಳಿಸಲಾಗುತ್ತದೆ (ವಿವರ ನೀಡುವುದು)?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು)

ಅ) ಇಲ್ಲ

ಆ) ಮೇಲಿನ ಉತ್ತರದ ಹಿನ್ನೆಲೆಯಲ್ಲಿ ಉದ್ಭವಿಸುವುದಿಲ್ಲ

ಇ) ಚಿಕ್ಕಮಗಳೂರು ಜಿಲ್ಲೆಯಲ್ಲಿ ಪರವಾನಗಿ ಪಡೆದ ದನಗಳ ಕಸಾಯಿ ಖಾನೆ ಇರುವುದಿಲ್ಲ ಆದರೆ ಪರವಾನಗಿ ಪಡೆದ ಕುರಿ/ಮೇಕೆ ಕಸಾಯಿ ಖಾನೆಗಳ ಸಂಖ್ಯೆ ಒಟ್ಟು 11

ಈ) ಹೌದು

ಉ) ಕರ್ನಾಟಕ ಗೋವಧೆ ಪ್ರತಿಬಂಧಕ ಮತ್ತು ಜಾನುವಾರು ಪರಿರಕ್ಷಣೆ ಅಧಿನಿಯಮ 1964 ಈಗಾಗಲೇ ಜಾರಿಯಲ್ಲಿರುತ್ತದೆ

506(534) ಶ್ರೀ ರವಿ ಸಿ ಟಿ (ಚಿಕ್ಕಮಗಳೂರು) ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ರಾಜ್ಯದಲ್ಲಿ ರೈತರ ಸಾಲ ಹಾಗೂ ಅವರ ಬಡ್ಡಿಯನ್ನು ಮನ್ನಾ ಮಾಡಲು ಸರ್ಕಾರ ಆದೇಶಿಸಿದೆಯೇ

ಆ) ಈ ಆದೇಶ ಯಾವಾಗಿನಿಂದ ಜಾರಿಗೆ ಬಂದಿದೆ

ಇ) ಯಾವ ರೀತಿಯ ಸಾಲಗಳನ್ನು ಎಷ್ಟು ಮೊತ್ತದವರೆಗೆ ಸಾಲ ಹಾಗೂ ಬಡ್ಡಿಯನ್ನು ಮನ್ನಾ ಮಾಡಲಾಗಿದೆ (ಜಿಲ್ಲಾವಾರು ವಿವರ ತಿಳಿಸುವುದು)

ಈ) ಈ ಸಾಲ ಮನ್ನಾ ಯೋಜನೆಯಲ್ಲಿ ತಾರತಮ್ಯವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಯಾವ ಬೆಳೆಯ ರೈತರುಗಳನ್ನು ಇದಕ್ಕಾಗಿ ಪರಿಗಣಿಸಲಾಗಿದೆ

ಉ) ಕಾಪಿ ಅಡಿಕೆ ಬೆಳೆಯುವ ರೈತರಿಗೆ ಸಹ ಈ ಪ್ರಯೋಜನವನ್ನು ನೀಡಲಾಗಿದೆಯೇ

ಊ) ಇಲ್ಲದಿದ್ದಲ್ಲಿ ಅದಕ್ಕೆ ಕಾರಣಗಳೇನು?

ಋ) ಕಳೆದ ಸರ್ಕಾರವು ಸಾಲ ಬಡ್ಡಿ ಮನ್ನಾಕ್ಕಾಗಿ ತೀರ್ಮಾನಿಸಿದ್ದು, ಆ ನಂತರ ತನ್ನ ನಿರ್ಧಾರವನ್ನು ಬದಲಾಯಿಸಿದ್ದು ನಿಜವೇ

ಎ) ನೂತನ ಸರ್ಕಾರವು ಇದರ ಬಗ್ಗೆ ಪರಿಶೀಲಿಸುವುದೇ (ವಿವರ ತಿಳಿಸುವುದು)

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು)

ಅ) ರಾಜ್ಯದಲ್ಲಿ ರೈತರ ಸಾಲ ಮನ್ನಾ ಮಾಡಿರುವುದಿಲ್ಲ ಆದರೆ 2002ನೇ ಖಾರೀಫ್ (ಮುಂಗಾರು) ಮತ್ತು 2002ನೇ ರಬಿ(ಹಿಂಗಾರು) ಅವಧಿಯಲ್ಲಿ ವಿತರಿಸಲಾದ ಎಲ್ಲಾ ಅಲ್ಪಾವಧಿ ಬೆಳೆ ಸಾಲಗಳ ಮೇಲಿನ ಬಡ್ಡಿ ಕ್ರಮವಾಗಿ ರೂ 127 00 ಕೋಟಿ ಮತ್ತು ರೂ 40 30 ಕೋಟಿಗಳನ್ನು ಮನ್ನಾ ಮಾಡಲು ಸರ್ಕಾರ ಆದೇಶಿಸಿದೆ

ದಿನಾಂಕ 31–03–2003ಕ್ಕೆ ತೋಟಗಾರಿಕೆ ಬೆಳೆಗಳಿಗೆ (ರಬ್ಬರ್, ವೆನಿಲ್ಲಾ, ಹಣಬೆ ಮತ್ತು ತಾಳೆ ಹೊರತುಪಡಿಸಿ) ಬಾಕಿಯಿರುವ ದೀರ್ಘಾವಧಿ ಚಾಲ್ತಿ ಸಾಲಿನ ಅಸಲನ್ನು ರೈತರು ಪಿಕಾರ್ಡ್ ಬ್ಯಾಂಕುಗಳಿಗೆ ಮರುಪಾವತಿಸಿದಲ್ಲಿ ಹೊರ ಬಾಕಿ (Outstandıng) ಸಾಲಗಳ ಮೇಲಿನ ಚಾಲ್ತಿ ಬಡ್ಡಿಯನ್ನು ಮನ್ನಾ ಮಾಡಲು ಮತ್ತು ತತ್ಸಂಬಂಧವಾದ ಮೊಬಲಗು 20 00 ಕೋಟಿ ರೂ ಗಳನ್ನು ಪಿಕಾರ್ಡ್ ಬ್ಯಾಂಕುಗಳಿಗೆ ಭರ್ತಿ ಮಾಡಿಕೊಡಲು ಮಂಜೂರಾತಿ ನೀಡಲಾಗಿದೆ ದಿನಾಂಕ 31–3–2003ಕ್ಕೆ ಬಾಕಿಯಿರುವ ದೀರ್ಘಾವಧಿ ಚಾಲ್ತಿ ಸಾಲಿನ ಅಸಲನ್ನು ರೈತರು ಶೇ 9ರ ಬಡ್ಡಿ ಸಹಿತ ಪಿಕಾರ್ಡ್ ಬ್ಯಾಂಕುಗಳಿಗೆ ಮರುಪಾವತಿಸಿದಲ್ಲಿ ಶೇ 9ಕ್ಕಿಂತ ಹೆಚ್ಚಿನ ಬಡ್ಡಿಯನ್ನು ಮನ್ನಾ ಮಾಡಲು ಮತ್ತು ತತ್ಸಂಬಂಧವಾದ ಮೊಬಲಗು 33 00 ಕೋಟಿ ರೂ.ಗಳನ್ನು ಪಿಕಾರ್ಡ್ ಬ್ಯಾಂಕುಗಳಿಗೆ ಭರ್ತಿ ಮಾಡಿಕೊಡಲು ಮಂಜೂರಾತಿ ನೀಡಲಾಗಿದೆ

ಆ) 2002ನೇ ಸಾಲಿನ ಅಲ್ಪಾವಧಿ ಖಾರಿಫ್ ಅವಧಿಗೆ ಸಂಬಂಧಿಸಿದಂತೆ ದಿನಾಂಕ 31–10–2002 ರಂದು ಮತ್ತು 2002ನೇ ಅಲ್ಪಾವಧಿ ರಬಿ ಅವಧಿಗೆ ಸಂಬಂಧಿಸಿದಂತೆ ದಿನಾಂಕ 15–9–2003ರಂದು ಸರ್ಕಾರ ಆದೇಶ ಹೊರಡಿಸಿದೆ ದೀರ್ಘಾವಧಿ ಸಾಲಗಳಿಗೆ ಸಂಬಂಧಿಸಿದಂತೆ ಸರ್ಕಾರವು ದಿನಾಂಕ 15–9–2003ರಂದು ಆದೇಶ ಹೊರಡಿಸಿದೆ

ಇ) ಸಾಲ ಮನ್ನಾ ಮಾಡಿರುವುದಿಲ್ಲ ಬಡ್ಡಿ ಮನ್ನಾ ರಿಯಾಯಿತಿ ವಿವರಗಳನ್ನು 'ಅ' ಮತ್ತು 'ಆ'ನಲ್ಲಿ ಒದಗಿಸಲಾಗಿದೆ

ಈ) ಸಾಲ ಮನ್ನಾ ಮಾಡಿರುವುದಿಲ್ಲ ಸಾಲ ಮನ್ನಾ ಮಾಡದೇ ಇರುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ

ಉ) ಸಹಕಾರ ಸಂಘಗಳಿಂದ ಸಾಲ ಪಡೆದ ಎಲ್ಲಾ ರೈತರಿಗೆ ಮೇಲಿನ ಬಡ್ಡಿ ಮನ್ನಾ ರಿಯಾಯಿತಿ ಈ ಪ್ರಯೋಜನವನ್ನು ನೀಡಲಾಗಿದೆ

ಊ) ಅನ್ವಯಿಸುವುದಿಲ್ಲ

ಋ) ಇಲ್ಲ

ಎ) ಉದ್ಭವಿಸುವುದಿಲ್ಲ

507(613) ಶ್ರೀ ರಾಜೇಂದ್ರ ವರ್ಮಾ (ಹುಲ್‌ಸೂರ್) ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಬೀದರ್ ಜಿಲ್ಲೆಯ ಹುಲಸೂರು ಮೀಸಲು ಕ್ಷೇತ್ರದಲ್ಲಿ ಯಾವುದೇ ಕಾಲೇಜುಗಳು ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ

ಆ) ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು

ಇ) ಗಡಿಭಾಗದಲ್ಲಿರುವ ಹುಲಸೂರು ಕ್ಷೇತ್ರದಲ್ಲಿ ಇರುವ ಕನ್ನಡ ಮಾಧ್ಯಮದ ಕಾಲೇಜುಗಳೆಷ್ಟು

ಈ) ಪ್ರೌಢಶಾಲೆ/ಕಾಲೇಜುಗಳನ್ನು ಯಾವ ಆಧಾರದ ಮೇಲೆ ನೀಡಲಾಗಿರುತ್ತದೆ (ಮಾಹಿತಿ ಒದಗಿಸುವುದು)